ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ/122/2020-21 ದಿನಾಂಕ: 03.10.2020.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ,

ವಿಷಯ: ದಿನಾಂಕ: 27.08.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ತಿದ್ದುಪಡಿ ಮಾಡಿದ ಅಂತಿಮ ನಡಾವಳಿಗಳನ್ನು ಕಳುಹಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಪತ್ರ ಸಂಖ್ಯೆ: ಬಿಸಿಯು/ ಎಸ್‌ವೈಎನ್/ವಿಶೇಷ ಸಬಭೆ/97/2020-21 ದಿನಾಂಕ: 04.09.2020.
2) ಮಾನ್ಯ 03 ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಇಮೇಲ್ ದಿನಾಂಕ: 11 ಹಾಗೂ 12, ಸೆಪ್ಟೆಂಬರ್ 2020
3) ಕುಲಪತಿಗಳ ಅನುಮೋದನೆ ದಿನಾಂಕ: 03-10-2020

ಉಲ್ಲೇಖ (1) ರ ಈ ಕಛೇರಿ ಪತ್ರದೊಂದಿಗೆ ಲಗತ್ತಿಸಿ ದಿನಾಂಕ: 27.08.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳಿಗೆ ಗೌರವಾನ್ವಿತ ಸಿಂಡಿಕೇಟ್ ಸದಸ್ಯರು ಉಲ್ಲೇಖ (2) ರಲ್ಲಿ ನಮೂದಿಸಿದ ಇಮೇಲ್ ಮುಖಾಂತರ ಸಲ್ಲಿಸಿದ ತಿದ್ದುಪಡಿಗಳನ್ನು ಪರಿಗಣಿಸಿ ನಡಾವಳಿಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಅಂತಿಮ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು 3/10/2020

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
BENGALURU
CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಷೇಶ ಸಭೆ/122/2020-21 ದಿನಾಂಕ: 01.10.2020.

ದಿನಾಂಕ 27.08.2020 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ: ಎಸ್. ಜಾಫೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್, | ಸದಸ್ಯರು |
| 5. | ಡಾ: ಬಿ. ಎ. ಅನುರಾಧಾ, | ಸದಸ್ಯರು |
| 6. | ಡಾ: ಆರ್. ಪಾರ್ವತಿ, | ಸದಸ್ಯರು |
| 7. | ಡಾ: ಇ. ಬಿ. ರಾಜೇಶ್, | ಸದಸ್ಯರು |
| 8. | ಪ್ರೊ. ಡಿ. ಜಿ. ಶ್ರೀನಿವಾಸಮೂರ್ತಿ, | ಸದಸ್ಯರು |
| 9. | ಶ್ರೀ. ಕರಣ್‌ಕುಮಾರ್ | ಸದಸ್ಯರು |
| 10. | ಶ್ರೀ. ಹೆಚ್. ಎನ್. ಹರಿಪ್ರಸಾದ | ಸದಸ್ಯರು |
| 11. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 12. | ಶ್ರೀ. ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 13. | ಡಾ. ಆರ್. ಕೆ. ಚಂದ್ರನಾಥ್ | ಸದಸ್ಯರು |
| 14. | ಡಾ. ವಿ. ಆರ್. ದೇವರಾಜು | ಸದಸ್ಯರು |
| 15. | ಪ್ರೊ: ಬಿ. ರಮೇಶ್, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 16. | ಶ್ರೀ. ಪಿ. ಕುಮಾರ್, ಕುಲಸಚಿವರು, | ಸದಸ್ಯ ಕಾರ್ಯದರ್ಶಿಗಳು |
| 17. | ಶ್ರೀ. ಪಿ. ಎಲ್. ವೆಂಕಟೇಶ್‌ಮೂರ್ತಿ ವಿತ್ತಾಧಿಕಾರಿಗಳು, | ವಿಶೇಷ ಆಹ್ವಾನಿತರು |

1/10/2020

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸನ್ಮಾನ್ಯ ಸದಸ್ಯರನ್ನು ಕುಲಸಚಿವರು ಸ್ವಾಗತಿಸಿದ ನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

1. Consideration of the recommendations of the Finance Committee constituted to monitor the Receipts and Expenditure of the 43rd Indian Social Science Congress.

43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಸಮ್ಮೇಳನ ಕುರಿತಂತೆ ದಿನಾಂಕ 04.6.2020 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಖರ್ಚು–ವೆಚ್ಚಗಳ ನಿರ್ವಹಣೆಗಾಗಿ ಸಿಂಡಿಕೇಟ್ ರಚಿಸಿದ ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. ಖರ್ಚು–ವೆಚ್ಚಗಳ ವಿವರ, ಪಾವತಿಗಾಗಿ ಬಾಕಿ ಇರುವ ಬಿಲ್ಲುಗಳು, ಪ್ರಾಯೋಜಕತ್ವ ನೀಡಿದ ಸಂಸ್ಥೆಗಳು ಹಾಗೂ ಅವರು ಪಾವತಿ ಮಾಡಿರುವ ಮೊತ್ತದ ವಿವರಗಳನ್ನು ಕುಲಸಚಿವರು ಸಭೆಗೆ ವಿವರಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಮತ್ತು ಡಾ. ಹೆಚ್.ಟಿ ಅರವಿಂದ ರವರು ದಿನಾಂಕ 04–06–2020 ರಂದು ಜರುಗಿದ ಸಭೆಯಲ್ಲಿ 21 ದಿವಸಗಳ ಒಳಗಾಗಿ ಸಭೆ ಕರೆಯಬೇಕೆಂದು ಸೂಚಿಸಲಾಗಿತ್ತು, ಆದರೆ ವಿಳಂಬವಾಗಿ ಸಭೆ ಕರೆಯದಿರುವುದಕ್ಕೆ ವಿವರ ನೀಡುವಂತೆ ತಿಳಿಸಿದರು. ಶ್ರೀ ಕರಣ್‌ಕುಮಾರ್ ರವರು ಸದರಿ ಸಭೆಯ ನಡಾವಳಿಗಳನ್ನು ದಿನಾಂಕ 18–06–2020 ರಂದು ಕಳುಹಿಸಿದ್ದು ಅವುಗಳಿಗೆ ಸದಸ್ಯರು ಸೂಚಿಸಿದ ತಿದ್ದುಪಡಿ ಮಾಡಿದ ನಡಾವಳಿಗಳನ್ನು ದಿನಾಂಕ 10.07.2020 ರಂದು ಕಳುಹಿಸಲಾಗಿದೆ, ಎರಡು ಪ್ರತ್ಯೇಕ ನಡಾವಳಿಗಳನ್ನು ಹೊರಡಿಸಿರುವುದು ಸರಿಯಲ್ಲ ಕ್ರೋಢಿಕೃತ ನಡಾವಳಿಗಳನ್ನು ಹೊರಡಿಸಬೇಕೆಂದು ತಿಳಿಸಿ, ಸಿಂಡಿಕೇಟ್ ತೀರ್ಮಾನಗಳಿಗೆ ಗೌರವ ಕೊಡಬೇಕು, ಯಾವುದೇ ಕಾರಣಕ್ಕೆ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗದಿದ್ದರೆ ಅದನ್ನು ಸದಸ್ಯರಿಗೆ ಮತ್ತು ಸಭೆಗೆ ತಿಳಿಸಬೇಕು ಎಂದು ಹೇಳಿ, ಸದಸ್ಯರು ಕಳುಹಿಸುವ ಇ–ಮೇಲ್ ಗಳಿಗೆ ಸಂಬಂಧಿಸಿದ ಅಧಿಕಾರಿಗಳು ಉತ್ತರ ನೀಡಬೇಕು ಎಂದು ಹೇಳಿದರು.

ಕಾರಣಾಂತರಗಳಿಂದ ನಿಗದಿತ ಸಮಯಕ್ಕೆ ನಡಾವಳಿಗಳನ್ನು ಹೊರಡಿಸಲು ಸಾಧ್ಯವಾಗಲಿಲ್ಲ ಎಂದು ಕುಲಸಚಿವರು ತಿಳಿಸಿ, ಕ್ರೋಢಿಕೃತ ನಡಾವಳಿಗಳನ್ನು ಕೂಡಲೇ ಹೊರಡಿಸಲಾಗುವುದು. ಒಂದು ವೇಳೆ ಯಾವುದೇ ಕಾರಣಕ್ಕೆ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗದಿದ್ದರೆ ಅದನ್ನು ಸದಸ್ಯರಿಗೆ ಮತ್ತು ಸಭೆಗೆ ತಿಳಿಸಲಾಗುವುದು ಎಂದು ಹೇಳಿದರು.

ಕುಲಪತಿಗಳು ವಿಷಯವನ್ನು ಸ್ಪಷ್ಟಪಡಿಸುತ್ತಾ, ವಿಶ್ವವಿದ್ಯಾಲಯದಲ್ಲಿ ಕೋವಿಡ್–19 ಸೋಂಕಿನ ಪ್ರಕರಣ ಕಂಡುಬಂದ ಕಾರಣ ಕೆಲವು ದಿವಸ ರಜೆ ಘೋಷಿಸಲಾಗಿತ್ತು ಅದಲ್ಲದೆ, ವಿಶ್ವವಿದ್ಯಾಲಯದಲ್ಲಿ ಸಮಾಲೋಚಕರಾಗಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಹಿರಿಯ ನಾಗರೀಕರಾಗಿದ್ದು, ಸೋಂಕಿನ ಹಿನ್ನೆಲೆಯಲ್ಲಿ ಕಛೇರಿ ಕೆಲಸಕ್ಕೆ ಲಭ್ಯರಾಗಲಿಲ್ಲ. ಹೊರಗುತ್ತಿಗೆ ಮೇಲೆ ನೇಮಕವಾದ ಸಿಬ್ಬಂದಿಗಳಿಗೆ ಕಛೇರಿ ಕೆಲಸ ನಿರ್ವಹಣೆಯಲ್ಲಿ ಸಂಪೂರ್ಣ ಅನುಭವವಿಲ್ಲ, ಈ ಎಲ್ಲಾ ಕಾರಣಗಳಿಂದ ವಿಳಂಬವಾಗಿದೆ. ಸಿಂಡಿಕೇಟ್ ನಿರ್ಧಾರಗಳಿಗೆ ಗೌರವವಿದೆ, ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಮಾಣಿಕ ಪ್ರಯತ್ನ ಮಾಡಲಾಗುವುದು. ಒಂದು ವೇಳೆ ಯಾವುದೇ ಕಾರಣಕ್ಕೆ ಕಾರ್ಯರೂಪಕ್ಕೆ ತರಲು ವಿಳಂಬವಾದಲ್ಲಿ, ಅದನ್ನು ಸದಸ್ಯರ ಹಾಗೂ ಸಭೆಯ ಗಮನಕ್ಕೆ ತರಲಾಗುವುದು ಮತ್ತು ಸದಸ್ಯರ ಇ–ಮೇಲ್ ಗಳಿಗೆ ಉತ್ತರಿಸಲು ಆಯಾ ವಿಭಾಗಗಳಿಗೆ ಸೂಚಿಸಲಾಗುವುದು ಎಂದು ಹೇಳಿದರು. ಇನ್ನು ಮುಂದೆ ಅಜೆಂಡಾಗಳನ್ನು ಇ–ಮೇಲ್ ಮುಖಾಂತರ ಕಳುಹಿಸಲಾಗುವುದು ಎಂದು ತಿಳಿಸಲು, ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ ರವರು, ಬೋರ್ಡ್ ರೂಮ್ ನಲ್ಲಿ ಅಗತ್ಯ ಇಂಟರ್‌ನೆಟ್ ಸಂಪರ್ಕ

ನಿರಂತರವಾಗಿ ಬರುವಂತೆ ವ್ಯವಸ್ಥೆ ಮಾಡಬೇಕೆಂದು ಹಾಗೂ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿದ ನಂತರ ಇ-ಮೇಲ್ ಮುಖಾಂತರ ಅಜೆಂಡಾ ಕಳುಹಿಸಬಹುದೆಂದು ತಿಳಿಸಿದರು.

ಸದಸ್ಯರಾದ ಡಾ: ಆರ್. ಪಾರ್ವತಿ ಯವರು ಕೋವಿಡ್ ಸೋಂಕಿನ ಕಾರಣದಿಂದ ಕಛೇರಿಗಳ ಕಾರ್ಯನಿರ್ವಹಣೆಯಲ್ಲಿ ಸಾಕಷ್ಟು ಸಮಸ್ಯೆಗಳು ಎದುರಾಗಿವೆ, ವಿಶ್ವವಿದ್ಯಾಲಯದ ಗುತ್ತಿಗೆ ಆಧಾರದ ಸಿಬ್ಬಂದಿಗಳಿಗೆ ಜವಾಬ್ದಾರಿ ನಿಗದಿಪಡಿಸುವುದು ಸಾಧ್ಯವಾಗುವುದಿಲ್ಲ, ಪೂರ್ಣಾವಧಿ ಖಾಯಂ ಸಿಬ್ಬಂದಿಗಳ ಕೊರತೆ ಇದೆ, ಕಾರಣ ವಿಶ್ವವಿದ್ಯಾಲಯದ ಇತಿಮಿತಿಗಳನ್ನು ನಾವು ಅರ್ಥಮಾಡಿಕೊಂಡು ಸಹಕರಿಸಬೇಕು ಎಂದು ಹೇಳಿದರು.

ದಿನಾಂಕ 04.6.2020 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಸಮ್ಮೇಳನ ಕುರಿತಂತೆ ಖರ್ಚು-ವೆಚ್ಚಗಳ ನಿರ್ವಹಣೆಗಾಗಿ ಸಿಂಡಿಕೇಟ್ ರಚಿಸಿದ ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

ಸನ್ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್, ಶ್ರೀಮತಿ ಜ್ಯೋತಿ ವಿಜಯ, ಡಾ ಹೆಚ್.ಟಿ ಅರವಿಂದ ರವರು ಮಹಾವಿದ್ಯಾಲಯಗಳು/ಸಂಸ್ಥೆಗಳು ನೀಡಿದ ದೇಣಿಗೆಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡದಿರುವುದು, ಪುಟ 5 ರಲ್ಲಿ ತಿಳಿಸಿದಂತೆ, ಪ್ರಾಯೋಜಕತ್ವ ನೀಡಿದ ಕಾಲೇಜುಗಳಿಂದ ಹಣಕಾಸಿನ ಸಹಾಯ ಪಡೆಯುವುದರ ಬದಲು ನೇರವಾಗಿ ಸಂಬಂಧಿಸಿದ ಮಾರಾಟಗಾರರಿಗೆ/ಸೇವಾ ಸಂಸ್ಥೆಗಳಿಗೆ ಪಾವತಿ ಮಾಡುವಂತೆ ತೀರ್ಮಾನಿಸಿರುವುದು, ವಿವಿಧ ಉಪಸಮಿತಿಗಳನ್ನು ರಚಿಸಲು ಇರುವ ಅಧಿಕಾರಗಳ ಕುರಿತು ಮಾಹಿತಿ ನೀಡಲು ಮತ್ತು ಡಾ. ಜಗನ್ನಾಥರವರನ್ನು ಜಂಟಿ ಕಾರ್ಯದರ್ಶಿಯಾಗಿ ಹೇಗೆ ನೇಮಕ ಮಾಡಲಾಗಿದೆ ಎನ್ನುವ ಕುರಿತು ವಿವರಣೆ ಬಯಸಿದರು.

ಕುಲಪತಿಗಳು ವಿಷಯವನ್ನು ವಿವರಿಸುತ್ತಾ, 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಸಂಘಟನಾ ಸಮಿತಿಯ ಅಧ್ಯಕ್ಷರಾಗಿ ತಾವು ಹಾಗೂ ಜಂಟಿ ಸಂಘಟನಾ ಕಾರ್ಯದರ್ಶಿಗಳಾದ ಡಾ. ಎಂ. ಮುನಿರಾಜು ಮತ್ತು ಡಾ. ವಿ. ಜಗನ್ನಾಥ್‌ರವರೊಂದಿಗೆ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಂಡಿರುವುದಾಗಿ ತಿಳಿಸಿದರು. ಡಾ: ಜಗನ್ನಾಥರವರು ಭಾರತೀಯ ಸಮಾಜ ವಿಜ್ಞಾನ ಅಕಾಡೆಮಿಯ ಅಜೀವ ಸದಸ್ಯರಾಗಿದ್ದಾರೆ ಎಂದು ತಿಳಿಸಿ, ಕೆಲವು ಪತ್ರಿಕೆಗಳಲ್ಲಿ ಹಣಕಾಸು ಸಹಾಯ ಪಡೆಯುವ ಕುರಿತು ವರದಿಗಳು ಬಂದಿರುವ ಹಿನ್ನೆಲೆಯಲ್ಲಿ ಸಂಬಂಧಿಸಿದ ಪ್ರಿನ್ಸಿಪಾಲರುಗಳ/ ಪದಾಧಿಕಾರಿಗಳ ಸಭೆ ಕರೆದು ಅವರೊಂದಿಗೆ ಚರ್ಚಿಸಿ ನೇರ ಪ್ರಾಯೋಜಕತ್ವ ನೀಡುವ ಕುರಿತು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಡಾ. ಆರ್. ಪಾರ್ವತಿಯವರು ಮಾತನಾಡಿ, ತಾವು ಸಿಂಡಿಕೇಟ್ ಸದಸ್ಯರಾಗಿ ನೇಮಕ ಹೊಂದುವ ಪೂರ್ವದಲ್ಲಿಯೇ ವಿಶ್ವವಿದ್ಯಾಲಯದಲ್ಲಿ 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜಿಸಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾಗಿದೆ ಹಾಗೂ ಇದಕ್ಕಾಗಿ ರೂ. 10.00 ಲಕ್ಷಗಳ ಮೂಲಧನ ಮಂಜೂರು ಮಾಡಲಾಗಿದೆ. ಡಾ. ವಿ ಜಗನ್ನಾಥ್ ರವರನ್ನು ಜಂಟಿ ಸಂಘಟನಾ ಕಾಯದರ್ಶಿಯಾಗಿ ನೇಮಕಮಾಡಲು ಹಾಗೂ ಅವರಿಗೆ ಮಾಸಿಕ ರೂ. 50,000 ಗಳ ಸಂಭಾವನೆ ನೀಡಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಇಷ್ಟು ದೊಡ್ಡ ಪ್ರಮಾಣದ ಕಾರ್ಯಕ್ರಮ ಜರುಗಿಸುವುದು ಸವಾಲಿನ ಕೆಲಸ. ಸಂಘಟನಾ ಸಮಿತಿಯ ಅಧ್ಯಕ್ಷರಿಗೆ ಉಪಸಮಿತಿಗಳನ್ನು ರಚಿಸುವ ಹಾಗೂ ತಕ್ಷಣಕ್ಕೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇರುತ್ತದೆ. ಕಾರ್ಯಕ್ರಮಕ್ಕಾಗಿ ಸಹಾಯಧನ ಕೋರಲು " Fund Raising Committee" "ಸಂಪನ್ಮೂಲ ಕ್ರೋಢೀಕರಣ ಸಮಿತಿ" ರಚಿಸಲಾಗಿದ್ದು, ಸಮಿತಿ ಕಾರ್ಯ ಪ್ರಾರಂಭ ಮಾಡಿದ ಸಮಯದಲ್ಲಿ ಕೆಲವು ಪತ್ರಿಕೆಗಳಲ್ಲಿ ವರದಿಗಳು ಬಂದ ಹಿನ್ನೆಲೆಯಲ್ಲಿ ಧನಸಹಾಯ ನೀಡಿದ ಚೆಕ್/ಡಿ.ಡಿ. ಗಳನ್ನು ಉಪಯೋಗಿಸಿಕೊಳ್ಳದೆ, ಅವುಗಳನ್ನು ಹಿಂತಿರುಗಿಸಿ

ಸಮ್ಮೇಳನದ ವಿವಿಧ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಆಯಾ ಸಂಸ್ಥೆಗಳು ನೇರವಾಗಿ ಪಾವತಿಸುವಂತೆ ಕೋರಲು ತೀರ್ಮಾನಿಸಲಾಗಿದೆ. ಸಂಘಟನಾ ಸಮಿತಿ ಒಳಗೊಂಡಂತೆ ವಿವಿಧ ಉಪಸಮಿತಿಗಳ ಪಟ್ಟಿ ಹಾಗೂ ಇತರ ವಿವರಗಳು 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಪ್ರಕಟಪಡಿಸಿ ಎಲ್ಲಾ ಸದಸ್ಯರಿಗೆ ವಿತರಿಸಿರುವ ಮುದ್ರಿತ ವರದಿಯಲ್ಲಿ ಇವೆ ಎಂದು ತಿಳಿಸಿದರು. ಇಂತಹ ಕಾರ್ಯಕ್ರಮಗಳನ್ನು ನಿರ್ವಹಿಸುವಲ್ಲಿ ಹಲವಾರು ಸಮಸ್ಯೆ ಹಾಗೂ ಸವಾಲುಗಳು ಎದುರಾಗುತ್ತವೆ. ಈ ಎಲ್ಲಾ ಅಂಶಗಳನ್ನು ಸಿಂಡಿಕೇಟ್ ಸಭೆ ಪರಿಗಣಿಸಬೇಕೆಂದು ಹೇಳಿದರು.

ಡಾ ಇ.ಬಿ. ರಾಜೇಶ್ ಹಾಗೂ ಪ್ರೊ. ಡಿ. ಜಿ. ಶ್ರೀನಿವಾಸಮೂರ್ತಿಯವರು ಚರ್ಚೆಯಲ್ಲಿ ಭಾಗವಹಿಸಿ, ಸಂಘಟನಾ ಸಮಿತಿ ಅಧ್ಯಕ್ಷರಿಗೆ ಉಪಸಮಿತಿಗಳನ್ನು ರಚಿಸುವ ಹಾಗೂ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವಿದೆ. ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿದಂತೆ ಖರ್ಚು ವೆಚ್ಚದ ವಿವರ, ಕಾಲೇಜುಗಳಿಂದ ಬಂದಿರುವ ಧನಸಹಾಯ, ಪ್ರಾಯೋಜಕತ್ವ ನೀಡಿದ ವೆಚ್ಚದ ವಿವರಗಳನ್ನು ಹಣಕಾಸು ಸಮಿತಿ ಸಭೆ ಪರಿಶೀಲಿಸಿ ಶಿಫಾರಸ್ಸು ಮಾಡಿದೆ. ಎಲ್ಲಾ ಕಾಲೇಜುಗಳಿಗೆ ಪತ್ರ ಬರೆದು ಮಾಹಿತಿ ನೀಡಿದ ಕಾಲೇಜುಗಳ ವಿವರಗಳನ್ನು ಒದಗಿಸಿದ್ದಾರೆ. ಎಲ್ಲಾ ವ್ಯವಹಾರಗಳು ಚೆಕ್/ಡಿ.ಡಿ. ಮುಖಾಂತರ ಆಗಿವೆ. ಇಂಥಹ ದೊಡ್ಡ ಪ್ರಮಾಣದ ಸಮ್ಮೇಳನ ನಡೆಸುವುದು ಕಷ್ಟ, ಅಧ್ಯಕ್ಷರಿಗೆ ಸಂದರ್ಭಕ್ಕೆ ತಕ್ಕಂತೆ ತೀರ್ಮಾನ ತೆಗೆದುಕೊಳ್ಳಲು ಅಧಿಕಾರವಿರಬೇಕು. ಆಡಳಿತಾತ್ಮಕ ಲೋಪದೋಷಗಳಾಗಿದ್ದರೆ ಅವುಗಳನ್ನು ಸರಿಪಡಿಸಿಕೊಂಡು ಇನ್ನು ಮುಂದೆ ಹೀಗೆ ಆಗದಂತೆ ಕ್ರಮಕೈಗೊಳ್ಳಬೇಕು.

ಶ್ರೀ ಹೆಚ್. ಎನ್. ಹರಿಪ್ರಸಾದ ರವರು, ಸದಸ್ಯರುಗಳಿಗೆ ಕೆಲವು ಸಂದೇಹಗಳಿವೆ ಅವುಗಳ ಕುರಿತು ಇಲ್ಲಿ ಪಾಟಿ ಸವಾಲು (Cross Examination) ಆಗಬಾರದು. ಸಂದೇಹಗಳ ನಿವಾರಣೆಗೆ ಒಂದು ಸಮಿತಿ ರಚಿಸಿ ಅದರ ವ್ಯಾಪ್ತಿಯನ್ನು ನಿರ್ಧಾರ ಮಾಡಬೇಕು ಎಂದು ಹೇಳಿದರು.

ಸದರಿ ವಿಷಯದ ಮೇಲೆ ಹಾಗೂ ಸಮಿತಿ ರಚಿಸುವ ಕುರಿತು ಸುದೀರ್ಘ ಚರ್ಚೆ ಮತ್ತು ಗಂಭೀರ ಚರ್ಚೆ ನಡೆಯಿತು. ಕೆಲವು ಸದಸ್ಯರು ನಿವೃತ್ತ ಜಿಲ್ಲಾ/ಸೆಷನ್ ನ್ಯಾಯಾಧೀಶರ ನೇತೃತ್ವದಲ್ಲಿ ಸಮತಿ ರಚಿಸಿ ಅವರು ನೀಡುವ ವರದಿ ಒಪ್ಪಿಕೊಳ್ಳಬೇಕೆಂದು ಇಲ್ಲವಾದಲ್ಲಿ ನಿವೃತ್ತ ಐ.ಎ.ಎಸ್. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆ ಸಮಿತಿಗೆ ಒಬ್ಬರು ಸಿಂಡಿಕೇಟ್ ಸದಸ್ಯರನ್ನು ಸದಸ್ಯರಾಗಿ ನೇಮಕ ಮಾಡಬೇಕೆಂದು ಸಲಹೆ ನೀಡಿದರು. ಕೆಲವು ಸದಸ್ಯರು ಸಿಂಡಿಕೇಟ್ ಸಭೆ ಒಂದು ಉಪಸಮಿತಿ ರಚಿಸಿ ಅಗತ್ಯ ವಿಚಾರಣೆ ನಡೆಸಬಹುದು ಎಂದು ಹೇಳಿದರು

ಕುಲಸಚಿವರು ವಿವರಣೆ ನೀಡಿ, ಈ ಸಮ್ಮೇಳನದ ಒಟ್ಟು ಹಣಕಾಸಿನ ವ್ಯವಹಾರ ರೂ. 41.25 ಲಕ್ಷ ಇದರಲ್ಲಿ ಇನ್ನು 26.50 ಲಕ್ಷ ಮೊತ್ತ ಯು.ಜಿ.ಸಿ., ಐ.ಎಸ್.ಎಸ್.ಎ., ಮತ್ತು ಮಹಾವಿದ್ಯಾಲಯಗಳಿಂದ ಬಾಕಿ ಇದೆ. ಈ ಮೊತ್ತದ ವಿಚಾರಣೆಗೆ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡುವ ಕುರಿತು ಸಭೆ ಪುನರ್ ಪರಿಶೀಲನೆ ಮಾಡುವುದು ಸೂಕ್ತ ಎಂದು ಹೇಳಿದರು.

ಒಂದು ಹಂತದಲ್ಲಿ ಸದಸ್ಯರಾದ ಡಾ. ಬಿ.ಎ. ಅನುರಾಧಾ ರವರು, ಸಭೆಯಲ್ಲಿ ನಡೆಯುತ್ತಿರುವ ಚರ್ಚೆಯ ಸ್ವರೂಪದ ಕುರಿತು ತೀವ್ರವಾದ ಆಕ್ಷೇಪ ವ್ಯಕ್ತಪಡಿಸಿ, ಕೇವಲ ಎರಡು ವಿಷಯಗಳ ಮೇಲೆ ಇಷ್ಟು ದೀರ್ಘ ಅವಧಿಯ ಚರ್ಚೆ ನಡೆಯುತ್ತಿರುವುದು ಸರಿಯಲ್ಲವೆಂದು ತಿಳಿಸಿದರು. ಪ್ರಸ್ತುತ ವಿದ್ಯಾರ್ಥಿಗಳ ಪ್ರವೇಶ ಸಮಯವಾಗಿರುವುದರಿಂದ, ಪ್ರಿನ್ಸಿಪಾಲರುಗಳಿಗೆ ಕಾಲೇಜುಗಳಲ್ಲಿ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಕೆಲವು ಸದಸ್ಯರುಗಳ ಆಸಕ್ತಿಯಿಂದಾಗಿ ಈ ವಿಷಯಗಳ ಕುರಿತು ಚರ್ಚೆಯಾಗುತ್ತಿದೆ ಹಾಗೂ ಚರ್ಚೆ ನಡೆಯುತ್ತಿರುವ ರೀತಿ ಗಮನಿಸಿದಲ್ಲಿ ಒಂದು ರೀತಿಯ ಭಯದ

ವಾತಾವರಣ ಉಂಟು ಮಾಡುತ್ತಿರುವಂತೆ ಕಂಡುಬರುತ್ತದೆ. ಹೀಗೆ ಆಗಬಾರದು ವಿಶ್ವವಿದ್ಯಾಲಯದ ಅಭಿವೃದ್ಧಿ ಕುರಿತಂತೆ ಚರ್ಚೆಯಾಗಬೇಕು. ಎಲ್ಲಾ ಹಣಕಾಸಿನ ವ್ಯವಹಾರಗಳು ಚೆಕ್/ಡಿಡಿ ಮುಖಾಂತರ ಆಗಿರುವುದರಿಂದ ಯಾವುದೇ ರೀತಿಯ ಹಣಕಾಸಿನ ಅವ್ಯವಹಾರಗಳಿಗೆ ಅವಕಾಶ ಇರುವುದಿಲ್ಲ. ಅಗತ್ಯವಾದರೆ ವಿವರಗಳನ್ನು ಪರಿಶೀಲಿಸಲು ಒಂದು ಸಮಿತಿ ರಚಿಸಿ, ಅಲ್ಲಿ ಕೂಲಂಕುಷ ಚರ್ಚೆಯಾಗಿ, ಸಮಿತಿ ನೀಡುವ ವರದಿಗೆ ಒಪ್ಪಿಗೆ ನೀಡೋಣ. ಈ ವಿಷಯಗಳ ಕುರಿತು ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ, ಮತ್ತೆ ಮತ್ತೆ ಅದೇ ವಿಷಯ ಚರ್ಚೆಮಾಡುವುದರಿಂದ ಸಮಯ ವ್ಯರ್ಥವಾಗುತ್ತದೆ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

**ಸಿಂಡಿಕೇಟ್ ತೀರ್ಮಾನ:**

ಸುದೀರ್ಘ ಚರ್ಚೆಯನಂತರ 43ನೇ ಸಮಾಜ ವಿಜ್ಞಾನ ಕಾಂಗ್ರೆಸ್ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಕೆಳಕಂಡ ಸಮಿತಿ ರಚಿಸಲು ತೀರ್ಮಾನಿಸಲಾಯಿತು.

| | | |
|---|---|---|
| 1. | ನಿವೃತ್ತ ಐ.ಎ.ಎಸ್. ಅಧಿಕಾರಿಗಳು | ಅಧ್ಯಕ್ಷರು |
| 2. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 3. | ಪ್ರೊ. ಡಿ. ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 4. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಕುಸಚಿವರು ಸದರಿ ಸಮಿತಿಗೆ ಅಧ್ಯಕ್ಷರಾಗಲು ಒಬ್ಬ ನಿವೃತ್ತ ಐ.ಎ.ಎಸ್. ಅಧಿಕಾರಿಯನ್ನುಸಂಪರ್ಕಿಸಿ ಅವರಿಗೆ ನೀಡಬೇಕಾದ ಸಂಭಾವನೆ ಹಾಗೂ ಇತರ ಸೌಕರ್ಯಗಳ ಕುರಿತು ಸಮಾಲೋಚಿಸಿ, ಅವರಿಂದ ಒಪ್ಪಿಗೆ ಪಡೆದು ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬೇಕೆಂದು ತೀರ್ಮಾನಿಸಲಾಯಿತು.

ಸಮಿತಿ ರಚನೆಯಾದ 30 ದಿವಸಗಳಲ್ಲಿ ಕೆಳಕಂಡ ಅಂಶಗಳ ಕುರಿತು ಪರಿಶೀಲಿಸಿ ವರದಿ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

ಅ) 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಪ್ರಾರಂಭದಿಂದ ಜರುಗಿದ ವಿವಿಧ ಚಟುವಟಿಕೆಗಳು.
ಆ) 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಸಂಬಂಧಿಸಿದ ಹಣಕಾಸು ವ್ಯವಹಾರಗಳು.
ಇ) ಕಾರ್ಯಕ್ರಮ ಅನುಷ್ಠಾನದಲ್ಲಿ ಅನುಸರಿಸಿದ ವಿಧಿವಿಧಾನಗಳು.

ಸಂಬಂಧಿಸಿದ ವ್ಯಕ್ತಿಗಳು/ಅಧಿಕಾರಿಗಳು ಸಮಿತಿಗೆ ಅಗತ್ಯ ಮಾಹಿತಿ ನೀಡಬಹುದು.

2. ದಿನಾಂಕ 04.06.2020 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯ ವಿಷಯ ಸಂಖ್ಯೆ (1) Examination Process Management System ಮತ್ತು E-Governance in Examination Management ಸೇವೆಗಳ ಕುರಿತಂತೆ ಸಿದ್ಧಪಡಿಸಿರುವ ವರದಿ.

ಕುಲಸಚಿವರು ವಿಷಯವನ್ನು ಸಭೆಯ ಪರಿಶೀಲನೆಗೆ ಮಂಡಿಸಿದರು. ಕಳೆದ ಸಭೆಯಲ್ಲಿ ತೀರ್ಮಾನಿಸಿದಂತೆ, ತತ್ರಾಂಶಗಳ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲು ರಚಿಸಲಾದ ಸಮಿತಿ ಸಲ್ಲಿಸಿರುವ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಸಮಿತಿಯ ಅಧ್ಯಕ್ಷರಾದ ಶ್ರೀ ಕರಣ್‌ಕುಮಾರ್ ರವರು,

ವರದಿಯ ಪ್ರಮುಖ ಅಂಶಗಳನ್ನು ಸಭೆಗೆ ವಿವರಿಸಿದರು. ಹೊರಗುತ್ತಿಗೆ ನೀಡಲಾದ ಸಂಸ್ಥೆ ಅಳವಡಿಸಿಕೊಂಡಿರುವ ಸುರಕ್ಷತಾ ಕ್ರಮಗಳು ಪರಿಪೂರ್ಣವಾಗಿಲ್ಲವೆಂದು ತಿಳಿಸಿ, ಅದರಲ್ಲಿರುವ ನ್ಯೂನ್ಯತೆಗಳನ್ನು ವಿವರಿಸಿದರು. ಸಮಿತಿಯ ವರದಿಯಲ್ಲಿ ಅಳವಡಿಸಿಕೊಳ್ಳಬೇಕಾದ ಸುರಕ್ಷತಾ ಕ್ರಮಗಳನ್ನು ವರದಿಯಲ್ಲಿ ಪಟ್ಟಿಮಾಡಿದ್ದು ಅವುಗಳನ್ನು ಸೇವೆ ಒದಗಿಸುವ ಸಂಸ್ಥೆಯವರು ತಂತ್ರಾಂಶದಲ್ಲಿ (ಸಾಫ್ಟ್‌ವೇರ್) ಮುಂದಿನ 30 ದಿವಸಗಳಲ್ಲಿ ಅಳವಡಿಸಿಕೊಳ್ಳಲು ಸದರಿ ಸಂಸ್ಥೆಗಳಿಗೆ ತಿಳಿಸಬೇಕು. ಸಂಸ್ಥೆಯವರು ಸುರಕ್ಷತಾ ಕ್ರಮಗಳ ಅಳವಡಿಕೆ ಕುರಿತು ಅಗತ್ಯ ಕ್ರಮಕೈಗೊಂಡ ನಂತರ ಅದನ್ನು ಒಬ್ಬ ಸಿನಿಯರ್ ಸಿಸ್ಟಮ್ ಅನಲಿಸ್ಟ್ ರಿಂದ ಪರಿಶೀಲಿಸಬೇಕು. ಸಿನಿಯರ್ ಸಿಸ್ಟಮ್ ಅನಲಿಸ್ಟ್ ಸೇವೆಯನ್ನು ಕಾರ್ಪೋರೇಟ್ ಸಂಸ್ಥೆ ಅಥವಾ ಎನ್.ಐ.ಸಿ. ಯಿಂದ ಪಡೆಯಹುದು ಎಂದು ತಿಳಿಸಿದರು. ಸೇವೆ ಒದಗಿಸುತ್ತಿರುವ ಸಂಸ್ಥೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಒಳಗೊಂಡಂತೆ ಸುಮಾರು 45 ಗ್ರಾಹಕರ ಮಾಹಿತಿಯನ್ನು ಒಂದೇ ಕ್ಲೌಡ್ (ಸರ್ವರ್)ನಲ್ಲಿ ಶೇಖರಿಸಿದ್ದಾರೆ. ಅದು ಸರಿಯಲ್ಲ. ಯಾವುದೇ ಹಂತದಲ್ಲಿ ಮಾಹಿತಿ ಪಡೆದುಕೊಳ್ಳಲು (Retrive) ಪ್ರಯತ್ನಿಸಿದಾಗ ಅದರ ಓ.ಟಿ.ಪಿ. ಕುಲಸಚಿವರು (ಮೌಲ್ಯಮಾಪನ) ರವರಿಗೆ ಬರಬೇಕು. ಸದ್ಯ ಮೇಲೆ ತಿಳಿಸಿದ ಅವಕಾಶಗಳು ತಂತ್ರಾಂಶದಲ್ಲಿ ಇಲ್ಲ. ವರದಿಯಲ್ಲಿ ನಮೂದಿಸಿರುವ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅಳವಡಿಸಿ ಧೃಢೀಕರಣ ಪಡೆದ ನಂತರ ಅದನ್ನು ಮೂರನೆಯ ವ್ಯಕ್ತಿ/ಸಂಸ್ಥೆಯಿಂದ ಪರಿಶೀಲಿಸಿ ಧೃಢೀಕರಿಸಬೇಕು ಎಂದು ಹೇಳಿದರು.

ಕುಲಸಚಿವರು ಮಾಹಿತಿ ನೀಡಿ, ಎನ್.ಐ.ಸಿ.ಯವರು ತಮ್ಮ ಸಿಸ್ಟಮ್ ಅನಲಿಸ್ಟ್ ಅಥವಾ ಸಿಸ್ಟಮ್ ಅಡ್ಮಿನಿಸ್ಟ್ರೇಟರ್ ಸೇವೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಶ್ರೀನಿವಾಸಯ್ಯನವರು, ಫಲಿತಾಂಶ ಪ್ರೊಸೆಸ್ ಆದನಂತರ ಎಲ್ಲಾ ಮಾಹಿತಿಗಳು ವಿಶ್ವವಿದ್ಯಾಲಯದ ಸರ್ವರ್‌ನಲ್ಲಿ ಇರುವ ಜೊತೆಗೆ ಅದರ ಮಿರರ್ ಇಮೇಜ್ ಬೇರೆ ಸ್ಥಳದಲ್ಲಿ ಇರಬೇಕು. ಹಾಗೆ ಕ್ರಮಕೈಗೊಂಡಿರುವದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದರು. ನಂತರ Examination Process Management System ಮತ್ತು E-Governance in Examination Management ಕುರಿತು ಸದಸ್ಯರುಗಳಾದ ಶ್ರೀ ಶ್ರೀನಿವಾಸಯ್ಯ, ಡಾ: ಇ. ಬಿ. ರಾಜೇಶ್, ಡಾ: ಹೆಚ್. ಟಿ. ಅರವಿಂದ, ಶ್ರೀ ಹೆಚ್. ಎನ್ ಹರಿಪ್ರಸಾದ, ಡಾ. ವಿ. ಆರ್. ದೇವರಾಜ್, ಶ್ರೀಮತಿ ಜ್ಯೋತಿ ವಿಜಯ, ಪ್ರೊ. ಶ್ರೀನಿವಾಸಮೂರ್ತಿ, ಡಾ. ಬಿ.ಎ. ಅನುರಾಧ ರವರು ಕೆಳಗಿನ ಅಂಶಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು.

1. ಟೆಂಡರ್ ಮೊತ್ತ ನಿರ್ಧರಿಸುವ ಸಮಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬಂದಿರುವ ಸಂಯೋಜಿತ ಮಹಾವಿದ್ಯಾಲಯಗಳ ಪ್ರವೇಶ ಸಂಖ್ಯೆ ಲಭ್ಯವಿರುವುದರಿಂದ ಅವುಗಳನ್ನು ಗಣನೆಗೆ ತೆಗೆದುಕೊಂಡು ಟೆಂಡರ್ ಮೊತ್ತ ನಿರ್ಧರಿಸಬಹುದಾಗಿತ್ತು ಹಾಗೇ ಮಾಡದೆ ಟೆಂಡರ್ ಮೊತ್ತವನ್ನು ರೂ. 1.25 ಕೋಟಿ ಎಂದು ನಮೂದಿಸಿರುವುದು ಸರಿಯಲ್ಲ.
2. ಟೆಂಡರ್ ಕರೆದಿರುವುದು ಒಂದು ವರ್ಷದ ಅವಧಿಗೆ ಅದರೆ ಸದರಿ ಒಪ್ಪಂದವನ್ನು ಐದು ವರ್ಷಗಳ ಅವಧಿಗೆ ಮಾಡಿಕೊಳ್ಳಲಾಗಿದೆ.
3. ಸಂಸ್ಥೆಯ ರುಜುವಾತುಗಳನ್ನು (credentials) ಗಳನ್ನು ಪರಿಶೀಲಿಸ ಬೇಕಾಗಿತ್ತು.
4. ಜಂಟಿ ಉದ್ಯಮ (Joint Venture) ಸಂಬಂಧಿಸಿದ ದಾಖಲೆಗಳನ್ನು ಕೊಟ್ಟಿರುವುದಿಲ್ಲ ಅದ್ದರಿಂದ ಒದಗಿಸಿದ ವಿವರಗಳು ಸ್ಪಷ್ಟವಾಗುವುದಿಲ್ಲ.

5. ಕಂಪನಿ ಸೆಕ್ರೆಟರಿ ಅವರಿಂದ ಸಲಹೆ/ಅಭಿಪ್ರಾಯ ಯಾವ ಆಧಾರದ ಮೇಲೆ ಪಡೆಯಲಾಗಿದೆ ಎಂಬ ವಿವರವಿಲ್ಲ.
6. ತಾಂತ್ರಿಕ ಸಲಹಾ ಸಮಿತಿ ಟೆಂಡರ್ ಕರೆಯಲು ಟೆಕ್ನಿಕಲ್ ಸ್ಪೆಸಿಫಿಕೇಶನ್ ಕೊಟ್ಟಿರುವ ಮಾಹಿತಿ ಇರುವುದಿಲ್ಲ.
7. ತಾಂತ್ರಿಕ ಬಿಡ್ ಪಕ್ರಿಯೆಯಲ್ಲಿ ಅರ್ಹತೆ ಹೊಂದಿದ ಸಂಸ್ಥೆಗಳ ವಿವರ ನೀಡಬೇಕು.
8. ಒಂದೇ ಬಿಡ್ ಇದ್ದರೇ ಅನುಸರಿಸಬೇಕಾದ ವಿಧಾನಗಳ ಕುರಿತು ಮಾಹಿತಿ ನೀಡಬೇಕೆಂದು ತಿಳಿಸಿದರು.
9. ಮೂರು ಪರೀಕ್ಷೆಗಳಿಂದ ಸುಮಾರು ಮೂರು ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳುವುದರಿಂದ ಸುಮಾರು ರೂ. 25-30 ಕೋಟಿ ಮೊತ್ತ ಈ ಪ್ರಕ್ರಿಯೆಯಲ್ಲಿ ಒಳಗೊಂಡಿದೆ.

ಕುಲಸಚಿವರು (ಮೌಲ್ಯಮಾಪನ) ರವರು ಸದಸ್ಯರು ಕೇಳಿದ ವಿವರಗಳನ್ನು ಒದಗಿಸುತ್ತಾ, ಈ ಪ್ರಕ್ರಿಯೆಯಲ್ಲಿ ಒಟ್ಟು ಎರಡು ಹೊರಗುತ್ತಿಗೆ ಸೇವೆಗಾಗಿ (ಇ.ಎಂ.ಎಸ್. ಮತ್ತು ಇ-ಗವರ್ನನ್ಸ್) ಟೆಂಡರ್ ಕರೆಯಲಾಗಿದೆ. ರಾಜ್ಯದ ಬಹಳಷ್ಟು ವಿಶ್ವವಿದ್ಯಾಲಯಗಳು ಇ.ಎಂ.ಎಸ್. ಗಾಗಿ ಮಾತ್ರ ಇಂತಹ ಸೇವೆ ಪಡೆದಿದ್ದು ಇ-ಗವರ್ನನ್ಸ್ ಸೇವೆ ಕೆಲವೇ ವಿಶ್ವವಿದ್ಯಾಲಯಗಳು ಪಡೆದಿರುತ್ತವೆ. ಟೆಂಡರ್ ಮೂಲಕ ಒಪ್ಪಿಕೊಂಡ ದರಗಳು ಬೇರೆ ವಿಶ್ವವಿದ್ಯಾಲಯಗಳ ದರಗಳಿಗೆ ಹೋಲಿಸಿದಲ್ಲಿ ಅತ್ಯಂತ ಹತ್ತಿರ/ಕಡಿಮೆಯಾಗಿವೆ. ಜಂಟಿ ಉದ್ಯಮ (Joint Venture) ಸಂಬಂಧಿಸಿದ ದಾಖಲೆಗಳನ್ನು ಎಲ್ಲ ಸದಸ್ಯರಿಗೆ ಒದಗಿಸಲಾಗುವುದು. ತಾಂತ್ರಿಕ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಕಾರ್ಯಸೂಚಿ ಜೊತೆಗೆ ಒದಗಿಸಲಾಗಿದ್ದು ಅದರಲ್ಲಿರುವ ಅಂಶಗಳನ್ನು ಸಭೆಗೆ ಓದಿ ಹೇಳಲಾಯಿತು. ಟೆಂಡರ್ ಡಾಕ್ಯುಮೆಂಟ್ ಸಲ್ಲಿಸಿದ, ಅರ್ಹತೆ ಹೊಂದಿದ ಹಾಗೂ ಅನರ್ಹವಾದ ಬಿಡ್ ಗಳ ವಿವರಗಳನ್ನು ಸಭೆಗೆ ತಿಳಿಸಿದರು. ತಾಂತ್ರಿಕ ಸಲಹಾ ಸಮಿತಿಯ ವರದಿಯನ್ನು ಪ್ರಸ್ತಾವನೆಯ ಪುಟ ಸಂ. 64, 65 ರಲ್ಲಿ ನೀಡಲಾಗಿದೆ. ಅದರಲ್ಲಿ ಇ.ಎಂ.ಎಸ್. ಮತ್ತು ಇ-ಗವರ್ನನ್ಸ್ ಸೇವೆಯನ್ನು ಹೊರಸಂಪನ್ಮೂಲದಿಂದ (Out-sourcing) ಮೂಲಕ ಪಡೆಯಲು ಶಿಫಾರಸ್ಸು ಮಾಡಲಾಗಿದೆ. ಟೆಂಡರ್ ಕರೆಯುವ ಪ್ರಾಧಿಕಾರ ತಾಂತ್ರಿಕ ವಿಶೇಷಣ (Technical specification) ಗಳನ್ನು ನಿರ್ಧರಿಸುತ್ತದೆ ಎಂದು ತಿಳಿಸಿದರು.

ಕುಲಪತಿಗಳು ಟೆಂಡರ್ ಪ್ರಕ್ರಿಯ ಪ್ರಾರಂಭವಾದ ಸಂದರ್ಭದಲ್ಲಿ ಯಾವುದೇ ಸಿಬ್ಬಂದಿಗಳು ಮತ್ತು ಸೌಲಭ್ಯಗಳು ಇಲ್ಲದೇ ಇರುವುದನ್ನು ವಿವರಿಸಿದರು. ಟೆಂಡರ್ ಪ್ರಕ್ರಿಯೆ ಪ್ರಾರಂಭದ ಪೂರ್ವದಲ್ಲಿ ಹಲವಾರು ಸಲ ಎನ್.ಐ.ಸಿ. ಒಳಗೊಂಡಂತೆ ಪರಿಣಿತರ ಜೊತೆಗೆ ಚರ್ಚೆ ಮಾಡಲಾಗಿದ್ದು, ಕೆ.ಟಿ.ಪಿ.ಪಿ. ನಿಯಮಗಳ ಅನುಗುಣವಾಗಿ ಕ್ರಮಕೈಗೊಳ್ಳಲಾಗಿದೆ. ಎನ್.ಐ.ಸಿ. ಯವರ ಹತ್ತಿರ ಪರೀಕ್ಷಾ ನಿರ್ವಹಣಾ ಪದ್ಧತಿಗೆ (ಇ.ಎಂ.ಎಸ್) ಸಂಬಂಧಿಸಿದ ತತ್ರಾಂಶ ಇದೆ. ಆದರೆ ಪರೀಕ್ಷಾ ಪೂರ್ವದ ಹಾಗೂ ಇನ್ನಿತರ ಕೆಲಸಗಳನ್ನು ನಿರ್ವಹಣೆಗೆ ಅಗತ್ಯವಾದ ಸೇವೆ ಇರಲಿಲ್ಲ. ಅಲ್ಲದೇ ಅವರಿಂದ ಮಾನವ ಸಂಪನ್ಮೂಲದ ಬೆಂಬಲವಿಲ್ಲ. ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಇ-ಗವರ್ನನ್ಸ್ ಸೇವೆ ಅಗತ್ಯವಾಗಿತ್ತು. ತಾಂತ್ರಿಕ ಸಲಹಾ ಸಮಿತಿ ನೀಡಿದ ಶಿಫಾರಸ್ಸಿನ ಮೇರೆಗೆ ಎರಡು ಸೇವೆಗಳಿಗೆ ಟೆಂಡರ್ ಪ್ರಕ್ರಿಯ ಪ್ರಾರಂಭಿಸಲಾಗಿದೆ. ಸಂಸ್ಥೆಗಳು ಟೆಂಡರ್‌ನಲ್ಲಿ ಸಲ್ಲಿಸಿದ ದರಗಳನ್ನು ಸಂಧಾನದ ಮೂಲಕ ಕಡಿಮೆ ಮಾಡಿ ಕಾರ್ಯಾದೇಶ ನೀಡಲಾಗಿದೆ. ಈ

ಸಂಸ್ಥೆ ರಾಜ್ಯದ ಹಲವಾರು ವಿಶ್ವವಿದ್ಯಾಲಯಗಳಿಗೆ ಸೇವೆ ನೀಡುತ್ತಿರುವುದನ್ನು ಪರಿಗಣಿಸಿ ಅಂತಿಮಗೊಳಿಸಲಾಗಿದೆ ಎಂದು ಹೇಳಿದರು.

ಸದಸ್ಯರಾದ ಡಾ: ಇ.ಬಿ.ರಾಜೇಶ್ ರವರು ವಿಶ್ವವಿದ್ಯಾಲಯದ ಪ್ರಾರಂಭದಿಂದ ಪಡೆಯುತ್ತಿರುವ ಸೇವೆ ಇಲ್ಲಿಯವರೆಗೆ ಯಾವುದೇ ಸಮಸ್ಯೆಗಳು ಇಲ್ಲದೆ ನಡೆದುಕೊಂಡು ಬಂದಿದೆ. ಈಗ ಇದರಲ್ಲಿ ಸುರಕ್ಷತೆಗೆ ಸಂಬಂಧಿಸಿದಂತೆ ಸಮಸ್ಯೆಗಳು ಇರುವುದರಿಂದ ಅವುಗಳನ್ನು ಸರಿಪಡಿಸಲು ಅವಕಾಶ ನೀಡಿ ಅದರ ಜೊತೆಜೊತೆಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೇರೆ ವ್ಯವಸ್ಥೆ ಮಾಡಿಕೊಂಡು ಈ ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾದ ಒಪ್ಪಂದವನ್ನು ರದ್ದುಪಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿ ತಂತ್ರಾಂಶಗಳ ಸುರಕ್ಷತಾ ಪರಿಶೀಲನಾ ಸಮಿತಿ ನೀಡಿದ ವರದಿಯ ಪ್ರಕಾರ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ಸೇವೆ ನೀಡುತ್ತಿರುವ ಸಂಸ್ಥೆಗೆ ಸೂಚನೆ ನೀಡಲಾಗುವುದು. ಮಿರರ್ ಇಮೇಜ್ ಬೇರೆ ಸ್ಥಳದಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಲಾಗುವದು ಎಂದು ತಿಳಿಸಿದರು. ಸರ್ಕಾರ ಈಗಾಗಲೇ ಆದೇಶ ಹೊರಡಿಸಿ, ರಾಜ್ಯದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯನ್ನು (Unified University and College Management System - UUCMS) ಅನುಷ್ಠಾನಕ್ಕೆ ತರಲು ತೀರ್ಮಾನಿಸಿದೆ. ಈ ಕುರಿತು ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಎಲ್ಲಾ ವಿಶ್ವವಿದ್ಯಾಲಯಗಳಿಂದ ಟೆಕ್ನಿಕಲ್ ಅಸಿಸ್ಟಂಟ್‌ಗಳನ್ನು ನಿಯೋಜನೆ ಮಾಡಿ ತರಬೇತಿ ನೀಡಲಾಗುತ್ತಿದೆ. ಬರುವ 5–6 ತಿಂಗಳುಗಳಲ್ಲಿ ನಾವು ಸರ್ಕಾರ ಸಿದ್ಧಪಡಿಸುವ ತಂತ್ರಾಂಶವನ್ನು ಉಪಯೋಗಿಸಲು ಪ್ರಾರಂಭ ಮಾಡಬೇಕಾಗುತ್ತದೆ. ಆ ಸಮಯದಲ್ಲಿ ಈಗಿರುವ ಸಂಸ್ಥೆಗಳೊಂದಿಗಿನ ಒಪ್ಪಂದ ರದ್ದುಮಾಡಿಕೊಳ್ಳಬೇಕಾಗುತ್ತದೆ. ಕಾರಣ ಸೇವೆ ನೀಡುತ್ತಿರುವ ಸಂಸ್ಥೆ, ಸಮಿತಿ ಶಿಫಾರಸ್ಸು ಮಾಡಿರುವ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡು ಅವುಗಳನ್ನು ವಿಶ್ವಸಾರ್ಹ ಮೂರನೇ ವ್ಯಕ್ತಿ / ಸಂಸ್ಥೆಯಿಂದ ಪರಿಶೀಲಿಸಿದ ನಂತರ ಮುಂಬರುವ ಅಕ್ಟೋಬರ್ ತಿಂಗಳ ಪರೀಕ್ಷೆ ಕೆಲಸ ನಿರ್ವಹಿಸಲು ತಿಳಿಸಿ, ಅವರೊಂದಿಗೆ ಮಾಡಿಕೊಂಡ ಒಪ್ಪಂದ ರದ್ದುಪಡಿಸಿಕೊಳ್ಳಬಹುದು. ಈ ಕುರಿತು ಸಭೆ ಪರಿಗಣಿಸಬೇಕೆಂದು ಹೇಳಿದರು. ಈಗ ಡಾಟಾ ವರ್ಗಾವಣೆಯ ಕೆಲಸ ಪ್ರಾರಂಭವಾಗಿದೆ. ಕೋವಿಡ್–19 ಸೋಂಕಿನ ಹಿನ್ನೆಲೆಯಲ್ಲಿ, ಕೆಳ ಹಂತದ ಸೆಮಿಸ್ಟರ್ ಪರೀಕ್ಷೆಗಳನ್ನು ರದ್ದು ಪಡಿಸಿರುವುದರಿಂದ ಪರೀಕ್ಷಾ ಸಂಬಂಧಿಸಿದ ಹೆಚ್ಚಿನ ಕೆಲಸಗಳು ಇರುವುದಿಲ್ಲ. ಹಾಗಾಗಿ ಈ ಸಂಸ್ಥೆಗಳಿಗೆ ಪೂರ್ತಿ ಬಿಲ್ಲು ಪಾವತಿಮಾಡಬೇಕಾದ ಅವಶ್ಯಕತೆ ಇರುವುದಿಲ್ಲ. ಅವರು ನಿರ್ವಹಿಸುವ ಕೆಲಸಕ್ಕನುಗುಣವಾಗಿ ದರಪಾವತಿ ಮಾಡಬೇಕಾಗುತ್ತದೆ. ಸರ್ಕಾರ ಪರೀಕ್ಷಾ ಶುಲ್ಕದಲ್ಲಿ 50% ಕಡಿಮೆ ಮಾಡುವಂತೆ ಸೂಚಿಸುವ ಸಾಧ್ಯತೆ ಇದೆ. ಈ ಸಂಸ್ಥೆಗಳಿಗೆ ಒಂದು ಪರೀಕ್ಷೆಯ ಬಿಲ್ಲು ಪಾವತಿ ಮಾಡಲಾಗಿದೆ. ನಂತರದ ಪರೀಕ್ಷೆಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಪಾವತಿಸಲು ಒತ್ತಾಯ ಮಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಹೆಚ್. ಎನ್. ಹರಿಪ್ರಸಾದ ರವರು ಈಗಿರುವ ಒಪ್ಪಂದವನ್ನು ರದ್ದುಪಡಿಸಬೇಕಾದರೆ ಕಾರಣಗಳನ್ನು ನೀಡಿ ಅವರಿಗೆ ನೋಟೀಸು ನೀಡಬೇಕಾಗುತ್ತದೆ ಎಂದು ಹೇಳಿದರು.

ಸಿಂಡಿಕೇಟ್ ತೀರ್ಮಾನ:

ಸುದೀರ್ಘವಾದ ಚರ್ಚೆಯ ನಂತರ ಸಿಂಡಿಕೇಟ್ ಸಭೆ ಕೆಳಗಿನ ನಿರ್ಧಾರ ತೆಗೆದುಕೊಂಡಿತು.

1. Examination Process Management System ಮತ್ತು E-Governance in Examination Management ತಂತ್ರಾಂಶ (software) ಗಳಲ್ಲಿ ಅಳವಡಿಸಿರುವ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲು ರಚಿಸಲಾದ ಸಮಿತಿಯ ವರದಿಯಲ್ಲಿ ಸೂಚಿಸಿರುವ ಸುರಕ್ಷತಾ ಕ್ರಮಗಳನ್ನು 30 ದಿವಸಗಳಲ್ಲಿ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳುವಂತೆ ಲಾಜಿಸಿಸ್ ಮತ್ತು ಯ್ಯೂನಿಕ್ಲೇರ್ ಸಲ್ಯೂಶನ್ಸ್ ಪ್ರವ್ಯೆಟ್ ಲಿಮಿಟೆಡ್ ಸಂಸ್ಥೆಯವರಿಗೆ ಸೂಚಿಸಲು ಮತ್ತು ಸಂಸ್ಥೆಯವರು ಅಗತ್ಯ ಕ್ರಮ ಕೈಕೊಂಡು ಆ ಕುರಿತು ಸಿನಿಯರ್ ಸಿಸ್ಟಮ್ ಅನಲಿಸ್ಟ್‌ರವರು ಪರಿಶೀಲಿಸಿದ ನಂತರ ವಿಶ್ವಾಸಾರ್ಹ ಮೂರನೇ ವ್ಯಕ್ತಿ / ಸಂಸ್ಥೆಯಿಂದ ಧೃಢೀಕರಿಸಿಕೊಳ್ಳಬೇಕೆಂದು ತೀಮಾನಿಸಲಾಯಿತು.

2. ರಾಜ್ಯ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಮತ್ತು ಅವುಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯನ್ನು (Unified University and College Management System - UUCMS) ಅನುಷ್ಠಾನಗೊಳಿಸಲು ತೀರ್ಮಾನಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಆ ಕಾರಣದಿಂದ ಸೆಪ್ಟಂಬರ್/ ಅಕ್ಟೋಬರ್ 2020ರ ಪರೀಕ್ಷೆ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಇವರ ಸೇವೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

3. ಮಧ್ಯಂತರ ಕ್ರಮವಾಗಿ ಮುಂದಿನ 30 ದಿವಸಗಳಲ್ಲಿ, ವಿಶ್ವವಿದ್ಯಾನಿಲಯದ ಅಧಿಕಾರಿಗಳು ಪ್ರಸ್ತಾಪಿಸಿದಂತೆ ಹೊರಗುತ್ತಿಗೆಯ ತಂತ್ರಾಂಶ ಸೇವೆಯನ್ನು ಮುಕ್ತಾಯಗೊಳಿಸಲು ಮೆ. ಲಾಜಿಸಿಸ್ ಮತ್ತು ಮೆ. ಯುನಿಕ್ಲೇರ್ ಸಂಸ್ಥೆಗಳೊಂದಿಗೆ ನಿರ್ಗಮನ ಯೋಜನೆಯನ್ನು (Exit Plan) ರೂಪಿಸಲು ಹಾಗೂ ನಿರ್ಗಮನ ಯೋಜನೆ (Exit Plan) ಮತ್ತು ಅದರಿಂದ ಉಂಟಾಗುವ ಹಣಕಾಸಿನ ಪರಿಣಾಮಗಳ ವಿವರಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲು ಸೂಚಿಸಲಾಯಿತು.

4. ಮೇಲೆ ಹೇಳಿದ ಪ್ರಕಾರ ನಿರ್ಗಮನ ಯೋಜನೆ (Exit Plan) ಒಪ್ಪಂದಕ್ಕೆ ಬರಲು ವಿಫಲವಾದಲ್ಲಿ, ಮೆ. ಲಾಜಿಸಿಸ್ ಮತ್ತು ಮೆ. ಯುನಿಕ್ಲೇರ್ ಸಂಸ್ಥೆಗಳ ಹೊರಗುತ್ತಿಗೆಯ ತಂತ್ರಾಂಶ ಸೇವೆಗಳಿಗೆ ಸಂಬಂಧಿಸಿದ ಇ–ಪ್ರೊಕ್ಯೂರಮೆಂಟ್ ಕಾರ್ಯವಿಧಾನ ಮತ್ತು ಆರ್ಥಿಕ ಅಂಶಗಳ ಕುರಿತು ಮಾಡಲಾದ ಆಪಾದನೆಗಳನ್ನು ಪರಿಶೀಲಿಸಲು ಒಬ್ಬ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಏಕ ಸದಸ್ಯ ವಿಚಾರಣಾ ಆಯೋಗ ರಚಿಸಲು ಮುಂದುವರೆಯಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ಸಾಮಾನ್ಯ ವಿಷಯಗಳ ಚರ್ಚೆ:

1. ಡಾ. ಇ.ಬಿ. ರಾಜೇಶ್ ರವರು ತಾವು ವಿಶ್ವವಿದ್ಯಾಲಯದಲ್ಲಿ ಎಂ.ಎಡ್. ಸ್ನಾತಕೋತ್ತರ ವಿಭಾಗ ಪ್ರಾರಂಭಿಸಬೇಕೆಂದು ಕೋರಿ ತಾವು ಒಂದು ಪತ್ರ ನೀಡಿರುವ ಕುರಿತು ತಿಳಿಸಿ ಅದನ್ನು ಶೈಕ್ಷಣಿಕ ಮಂಡಳಿ/ಸಿಂಡಿಕೇಟ್ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಲು ಬೇಗ ಕ್ರಮಕೈಗೊಳ್ಳಬೇಕೆಂದು ಪ್ರಸ್ತಾಪಿಸಿದರು. ಕುಲಪತಿಗಳು ಈ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

2. ಶ್ರೀ ಹೆಚ್. ಆರ್. ಸತೀಶ್ ಮತ್ತು ಶ್ರೀ ಶ್ರೀನಿವಾಸಯ್ಯ ರವರು ಕ್ರಿಕೆಟ್ ಮೈದಾನಕ್ಕೆ ಹೊಂದಿಕೊಂಡಿರುವ ಕಂಪೌಂಡ ಗೋಡೆಯನ್ನು ಪಕ್ಕದಲ್ಲಿ ಕಟ್ಟಡ ನಿರ್ಮಿಸುತ್ತಿರುವವರು ಒಡೆದು ಹಾಕಿದ್ದಾರೆ. ಈ ಕುರಿತು ಮಾಹಿತಿ ನೀಡುವಂತೆ ತಿಳಿಸಿದರು. ಕುಲಪತಿಗಳು ವಿವರ ನೀಡಿ, ಅಲ್ಲಿ ಒಂದು ಬಡ ವಿದ್ಯಾರ್ಥಿಗಳಿಗೆ ವಸತಿಗೃಹ ನಿರ್ಮಾಣ ನಡೆಯುತ್ತಿದ್ದು, ಅವರಿಗೆ ಕಟ್ಟಡ ನಿರ್ಮಾಣದ ವಸ್ತುಗಳನ್ನು ಸಾಗಿಸಲು ಅನುಮತಿ ನೀಡಲಾಗಿದ್ದು, ಕೂಡಲೇ ಅದನ್ನು ನಿರ್ಮಿಸಿಕೊಡಲು ಸೂಚಿಸುವುದಾಗಿ ತಿಳಿಸಿದರು.

ಕುಲಸಚಿವರ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಿಂಡಿಕೇಟ್ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು |

ಕುಲಸಚಿವರು 1/10/2020

ಬೆಂಗಳೂರು ನಗರ ವಿಶ್ವವಿದ್ಯಾನಿಲಯ